B.A VIth Semester

DEPT OF SOCIOLOGY

Block III Unit I Environment Pollution
Meaning, Definition
Types of Environment Pollution
Causes , consequences and remedies of Environment Pollution

# ಪರಿಸರ ಮಾಲಿನ್ಯ

ನಮ್ಮ ಸುತ್ತಮುತ್ತಲಿನ ಬಾಯ್ಯ ಜಗತ್ತನ್ನು ಪರಿಸರವೆಂದು ಕರೆಯುತ್ತಾರೆ. ಇದರಲ್ಲಿ ಗಾಳಿ ಬೆಳಕು, ಬೆಟ್ಟ, ಗುಡ್ಡ, ಕಲ್ಲು ಮಣ್ಣು, ಗಿಡ ಮರ, ಕ್ರಿಮಿ ಕೀಟ, ಪ್ರಾಣಿ ಪಕ್ಷಿ ನೆಲ ಜಲ ಮುಂತಾದವುಗಳು ಜೀವ ಸಂಕುಲದ ಬೆಳವಣಿಗೆಗೆ ಹಾಗೂ ಅದರ ಅಭಿವೃದ್ಧಿಗೆ ಪೂರಕವಾಗಿದೆ. ಮಾನವ ಸಂಕುಲದ ಬದುಕಿನ ಪ್ರತಿಯೊಂದು ದಾರಿಯು ಪರಿಸರದ ಜೊತೆ ನೇರವಾದ ಸಂಬಂಧವಿದೆ. ಪರಿಸರ ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಇವು ಒಂದಕ್ಕೊಂದು ಪೂರಕವಾಗಿ ಸಮಾಜದ ಪ್ರಗತಿಗೆ ಕಾರಣವಾಗಿವೆ. ಮಾನವರ ಸಾಮಾಜಿಕ, ಆರ್ಥಿಕ ರಾಜಕೀಯ, ಮತ್ತು ಸಂಸ್ಕೃತಿಕ ವ್ಯವಸ್ಥೆಗಳು ಸಹ ಪರಿಸರವನ್ನೆ ಅವಲಂಬಿಸಿದೆ. ಹೀಗಾಗಿ ಪ್ರತಿಯೊಂದು ಜೀವ ಸಂಕುಲಗಳು ಸಹ ತಮ್ಮ ಸುತ್ತ ಮುತ್ತಲಿನ ಪರಿಸರಕ್ಕೆ ಅನುಗುಣವಾಗಿಯೇ ತಮ್ಮನ್ನು ಹೊಂದಿಸಿಕೊಂಡು ಬೆಳೆಯುತ್ತವೆ. ಈ ರೀತಿಯಾಗಿ ಮಾನವನು ತಮ್ಮ ಅಸ್ತಿತ್ವ ಮತ್ತು ಅಭಿವೃದ್ಧಿಗೆ ಸಹಾಯಕವಾಗಿರುವ ಪರಿಸರವನ್ನು ಅವರಿಗೆ ಅರಿವಿಲ್ಲದೆಯ ತಮ್ಮ ಸ್ವಾರ್ಥಪರ ಚಟುವಟಿಕೆಗಳಿಂದ ತಮ್ಮ ಸುತ್ತಮುತ್ತಲಿನ ಪರಿಸರವನ್ನು ಮಾಲಿನ್ಯಗೊಳಿಸುತ್ತಿದ್ದಾರೆ. ಅಮೇರಿಕಾದ ಮಾರ್ಗರೇಟ್ ಮೀಡ್ ಎಂಬ ಮಾನವಶಾಸ್ತ್ರಜ್ಞೆ " ಪರಿಸರ ಮಾಲಿನ್ಯವು ಆಧುನಿಕ ,ಔದ್ಯಮಿಕ ಹಾಗೂ ನಗರ ಪ್ರಧಾನ ನಾಗರಿಕತೆಯು ಸೃಷ್ಟಿ ಮಾಡಿದ ಅತ್ಯಂತ ದೊಡ್ಡ ಸವಾಲುಗಳಲ್ಲೊಂದು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಪರಿಸರ ಮಾಲಿನ್ಯದ ಸಮಸ್ಯೆಯು ಕೇವಲ ಭಾರತ ದೇಶದ ಸಮಸ್ಯೆ ಮಾತ್ರ ಆಗಿರದೆ ಇಡೀ ವಿಶ್ವದ ಸಮಸ್ಯೆಯಾಗಿದೆ. ಅಥವಾ ಇದು ಜಾಗತಿಕ ಸಮಸ್ಯೆ ಎಂದು ಕರೆಯಬಹುದು. ಪ್ರಸ್ತುತವಾಗಿ ವಿಶ್ವದಾದ್ಯಂತ ಭವಿಷ್ಯದ ತೊಂದರೆಯನ್ನು ಸೂಚಿಸುವ ಪರಸರ ಮಾಲಿನ್ಯವು ಭೂಮಿಯ ಎಲ್ಲಾ ಜೀವಿಗಳ ಮೇಲೆ ಹಾನಿಕಾರಕವಾದ ಪರಿಣಾಮವನ್ನು ಬೀರುತ್ತದೆ. ಹಾನಿಕಾರಕವಾದ ಮಾಲಿನ್ಯವು ಆರೋಗ್ಯ, ನೆಲ, ಜಲ, ಭೂಮಿ, ಶಬ್ದ, ಮತ್ತು ವಾಯುವಿನ ಮೇಲೆ ಗಂಭೀರವಾದ ಪರಿಣಾಮವನ್ನು ಬೀರುತ್ತದೆ. ಈ ಹಾನಿಕಾರಕ ಪರಿಣಾಮದಿಂದ ಭೂಮಿಯ ಮೇಲಿನ ಮಾನವ ಜೀವನ ವಿವಿಧ ರೀತಿಯ ತೊಂದರೆಯನ್ನು ಎದುರಿಸುವುದಲ್ಲದೆ ಪ್ರಕೃತಿಯ ಮೇಲೂ ಪರಿಣಾಮವನ್ನು ಬೀರುತ್ತದೆ. ಉದಾ: ಗಿಡಮರಗಳು ಸ್ವಾಭಾವಿಕವಾಗ ಬೆಳೆಯುಲಾರವು, ಹೆಚ್ಚಾಗಿ ಬಾಡುತ್ತಿರುತ್ತವೆ, ಅಥವಾ ಬೇಗ ಒಣಗುತ್ತವೆ. ನೀರು ಕಲುಷಿತವಾಗಿರುತ್ತದೆ. ಕಲಬೆರಕೆ ಆಹಾರ ಪದಾರ್ಥಗಳು ಹೆಚ್ಚಾಗಿ ಬೆಳೆಯಲಾಗುತ್ತದೆ. ನಗರಗಳಲ್ಲಿ ಧೂಳು ಹೊಗೆ ಮಿಶ್ರಿತ ಗಾಳಿ ಉಂಟಾಗಿ ವಾಯುಮಾಲಿನ್ಯದಿಂದ ಅನೇಕ ಚರ್ಮ ಮತ್ತು ಸಾಂಕ್ರಾಮಿಕ ರೋಗಗಳು ಪರಿಸರದಲ್ಲಿ ಕಂಡು ಬರುತ್ತವೆ.

ಇಂತಹ ಪರಿಸ್ಥಿತಿಯನ್ನು ನಿರ್ವಹಿಸಲು ವಿಶ್ವಪರಿಸರ ವಿಭಾಗದವರು ಪ್ರಪಂಚದಾದ್ಯಂತ ನೆಲ, ಜಲ, ಮತ್ತು ವಾಯುವನ್ನು ಕಲುಷಿತಗೊಳಿಸುತ್ತಿರುವ ಮಲಿನ ವಸ್ತುಗಳನ್ನು ಗುರುತಿಸಿದ್ದಾರೆ. ಅವುಗಳು, ಮಸಿ, ಹೊಗೆ, ಧೂಳು, ಇಂಗಾಲದ ಡೈಆಕ್ಸೈಡ್, ಇಂಗಾಲದ ಮೊನಾಕ್ಸೈಡ್, ಗಂಧಕದ ಆಕ್ಸೈಡ್‌ಗಳು, ಸಾರಜನಕ ಆಕ್ಸೈಡ್, ಕ್ಲೋರಿನ, ಮುಂತಾದ ಅನಿಲಗಳಾದರೆ, ಪಾದರಸ, ಸೀಸ, ಸತು, ಕಬ್ಬಿಣ, ನಿಕ್ಕಲ್, ಕ್ಯಾಡ್ಮಿಯಂ, ಕ್ರೋಮಿಯಂ ಮುಂತಾದ ಲೋಹಗಳು, ನೈಟ್ರೇಟ್‌ಗಳು, ಫ್ಲೋರೈಡ್‌ಗಳು ಮೊದಲಾದ

ಲವಣಗಳು, ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು, ಕಳೆನಾಶಕಗಳು, ಶೀಲೀಂದ್ರನಾಶಕಗಳು ಮುಂತಾದವು ಕೃಷಿ ರಾಸಾಯನಿಕಕಗಳು, ಈಥರ್, ಬೆಂಜೀನ್, ಅಸಿಟಿಕ್ ಆಮ್ಲ ಮುಂತಾದ ಸಂಕೀರ್ಣ ಸಾವಯವ ವಸ್ತುಗಳು, ದ್ಯುತಿರಾಸಾಯನಿಕ ಹೊಗೆ ಅಥವಾ ಫೋಟೋ ಕೆಮಿಕಲ್ ಆಕ್ಸೈಡ್,ಓಜೋನ್, ಅಲ್ಡಿಹೈಡ್ ಮೊದಲಾದ ದ್ಯುತಿ ರಾಸಾಯನಿಕ ಆಕ್ಸೈಡ್‌ಗಳು, ನೈಟ್ರಿಕ್ ಆಮ್ಲ, ಗಂಧಕಾಮ್ಲ, ಮುಂತಾದ ಆಮ್ಲ ಕಣಗಳು, ಘನ ತ್ಯಾಜ್ಯಗಳು, ವಿಕಿರಣ ತ್ಯಾಜ್ಯಗಳು, ಶಬ್ದ ಇತ್ಯಾದಿಗಳು ಮಾನವ ಭೂಮಿಯಲ್ಲಿಯ ವಿವಿಧ ಭಾಗಗಳಲ್ಲಿ ವಿವಿಧ ಕಡೆಗಳಲ್ಲಿ ವ್ಯಾಪಿಸಿದ್ದು ಪರಿಸರದ ಮಾಲಿನ್ಯವನ್ನುಂಟು ಮಾಡುತ್ತವೆ.

ಪ್ಲಾಸ್ಟಿಕ್ ಪದಾರ್ಥಗಳು ಪರಿಸರಕ್ಕೆ ಹಾನಿಯನ್ನುಂಟು ಮಾಡುತ್ತವೆ. ಪ್ಲಾಸ್ಟಿಕ್ ಪದಾರ್ಥಗಳು ಭೂಮಿಯ ಮಣ್ಣಿನಲ್ಲಿ ವಿಲೀನವಾಗದೆ ವಾಯುಮಾಲಿನ್ಯವನ್ನುಂಟು ಮಾಡುತ್ತವೆ. ಈ ಎಲ್ಲಾ ಬಗೆಯ ಪರಿಸರದ ಮಾಲಿನ್ಯವು ಭೂಮಿಯನ್ನು ಅಳಿವಿನ ಅಂಚಿನಲ್ಲಿ ತಳ್ಳುತ್ತಿದೆ. ಈ ಸಮಸ್ಯೆಯನ್ನು ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಿಸಿದ ಪರಿಸರ ತಜ್ಞರು ಮನುಕುಲವು ತಮ್ಮ ಅಗತ್ಯಗಳನ್ನು ಆದಷ್ಟು ಕಡಿಮೆ ಮಾಡಿಕೊಂಡು ತ್ಯಾಜ್ಯ ವಸ್ತುಗಳನ್ನು ಬಳಕೆ ಮಾಡುವುದು ಕಡಿಮೆ ಮಾಡಬೇಕಾಗಿರುವುದು ಅನಿವಾರ್ಯವಾಗಿದೆ ಎಂದು ಹೇಳಿದ್ದಾರೆ.

ಪರಿಸರ ಮಾಲಿನ್ಯವೆಂಬುದು ಆಧುನಿಕ ನಾಗರಿಕ ಸಮಾಜದ ಸಮಸ್ಯೆಯಾಗಿದ್ದು ಮಾನವ ಜನಸಂಖ್ಯೆ ಹೆಚ್ಚುತ್ತಾ ಹೋದಂತೆ, ಮಾನವ ಜೀನದ ಮಟ್ಟದಲ್ಲಿ ಸುಧಾರಣೆಯಾಗುತ್ತಾ ಹೋದಂತೆ ಪರಿಸರದ ಮೇಲೆ ಒತ್ತಡ ಹೆಚ್ಚಾಗಿ ಪರಿಸರದ ದುರ್ಬಳಕೆಯು ಹೆಚ್ಚುತ್ತಾ ಹೋಯಿತು. ಹೀಗೆ ಪರಿಸರ ಮಾಲಿನ್ಯದ ಸಮಸ್ಯೆಯು ಹಲವಾರು ರೂಪಗಳಲ್ಲಿ ಕಂಡು ಬರುತ್ತವೆ. ಭೂಮಿಯ ಮೇಲೆ ಮಾನವನ ಅನುಕೂಲಕ್ಕೆ ಅಸ್ತಿತ್ವದಲ್ಲಿರುವ ನೀರು, ಶಬ್ದ,ಜಲ ಸಮೃದ್ಧಿಯು ಪರಿಸರ ಮಾಲಿನ್ಯದ ಭಾಗಗಳಾಗಿ ಮಾನವಕುಲವನ್ನು ಚಿಂತಿಸುವಂತೆ ಮಾಡಿದೆ. ಹೀಗಾಗಿ ಈ ಪರಿಸರ ಮಾಲಿನ್ಯ ಸಮಸ್ಯೆಯನ್ನು ನಿಯಂತ್ರಿಸಲು, ತಡೆಗಟ್ಟಲು ಅಥವಾ ಪರಿಹಾರಗಳನ್ನು ಸೂಚಿಸಲು ಅರ್ಥಶಾಸ್ತ್ರಜ್ಞರು, ಪರಿಸರ ಶಾಸ್ತ್ರಜ್ಞರು, ಆಡಳಿತಗಾರರು ಮತ್ತು ಪರಿಸರಾಸಕ್ತರಷ್ಟೆ ಅಲ್ಲದೆ ಸಮಾಜಶಾಸ್ತ್ರಜ್ಞರು ಚಿಂತಿಸಿ ಕಾರ್ಯಾರೂಪಗೊಳಿಸುವುದು ಅನಿವಾಗಿರುತ್ತದೆ.

## ಪರಿಸರದ ಅರ್ಥ Meaning of the Environment

ಒಂದು ಪರಿಸರದಲ್ಲಿ ಮಣ್ಣು, ವಾಯುಗುಣ, ಸಸ್ಯವರ್ಗ,ಮತ್ತು ಪ್ರಾಣಿವರ್ಗಗಳನ್ನೊಳಗೊಂಡಿರುವ ವ್ಯವಸ್ಥೆಯನ್ನು ಪರಿಸರ ಎನ್ನುವರು.

ಪರಿಸರ ಎಂಬ ಪದವು ಆಂಗ್ಲ ಭಾಷೆಯಲ್ಲಿ ಎನ್ವಿರಾನ್‌ಮೆಂಟ Environment ಎಂದು ಕರೆಯುತ್ತಾರೆ. ಎನ್ವಿರಾನ್‌ಮೆಂಟ ಎಂಬ ಪದವು ಎನವಿರಾನ್ ಎಂಬ ಪದದಿಂದ ಬಂದಿದೆ. ಎನ್ವಿರಾನ್ environ ಎಂದರೆ ಆಂಗ್ಲ ಭಾಷೆಯಲ್ಲಿ ಖಣಡಿಡಿಔಣಟಿಜ ಎಂಬುದಾಗಿ ಅರ್ಥವಿದೆ. ಈ ಪದದ ಅರ್ಥದಂತೆ ಪರಿಸರ ಎಂದರೆ ನಮ್ಮ ಸುತ್ತಮುತ್ತಲು ಆವರಿಸಿರುವ ವ್ಯವಸ್ಥೆಯನ್ನು ಸೂಚಿಸುತ್ತದೆ.

ಪರಿಸರ ಎಂದರೆ ನಮ್ಮ ಸುತ್ತಮುತ್ತಲಿನ ಜೈವಿಕ ಮತ್ತು ಅಜೈವಿಕ ವಸ್ತುಗಳು ಅಲ್ಲಿನ ಘಟನೆಗಳು ಮತ್ತು ಅವುಗಳ ಪ್ರಭಾವಗಳನ್ನು ಒಳಗೊಂಡಿರುವುದೇ ಪರಿಸರವೆನ್ನಬಹುದು.

## ಮಾಲಿನ್ಯದ ಅರ್ಥ Meaning of the Pollution

ಪಿ.ಹೆಚ್ಚ ಕಾಲ್ಲಿನ್‌ರವರ ಜೀವ ಪರಿಸರಶಾಸ್ತ್ರ ಮತ್ತು ಪರಿಸರದ ಶಬ್ದಕೋಶದ ಪ್ರಕಾರ; ಮಾಲಿನ್ಯವೆಂದರೆ ಪರಿಸರದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಕೆಡಕನ್ನುಂಟು ಮಾಡುವ ವಸ್ತುಗಳು ಕೇಂದ್ರೀಕರಣವಾಗಿದ್ದು, ಕೆಲವೊಮ್ಮೆ ಇವು ಜನರಿಂದ ಸೃಷ್ಟಿಯಾಗಿ ಸಂಚಯನವಾಗಿವೆ" ಎಂದಿದ್ದಾರೆ.

## ಪರಿಸರ ಮಾಲಿನ್ಯ ಪದದ ಅರ್ಥ Meaning of the Environment Pollution

ಪರಿಸರ ಮಾಲಿನ್ಯ ಎಂಬ ಶಬ್ದವು ಪಾಲ್ಯುಶನ್ ಎಂಬ ಶಬ್ದಕ್ಕೆ ಸಮನಾಗಿದ್ದರು ಈ ಪದವು ಲ್ಯಾಟೀನ ಭಾಷೆಯ ಪಾಲ್ಯುಟಿನಿಯಮ್ pollutionem ಎಂಬ ಧಾತುವಿನಿಂದ ಬಂದಿದೆ, pollutionem ಎಂದರೆ ಹೊಲಸು ಮಾಡು ಎಂದರ್ಥ. ಮಾಲಿನ್ಯ ಎಂಬ ಪದವನ್ನು ಪರಿಸರವು ಮಲಿನಗೊಂಡಿರುವುದನ್ನು, ಹಾಳಾಗಿರುವುದನ್ನು ಸೂಚಿಸುತ್ತದೆ.

ಪಾಲ್ಯುಶನ್ ಎಂದರೆ ಮಲೀನ, ಮಾಲಿನ್ಯ, ಹೊಲಸು, ಗಲೀಜು, ಕೊಳಕು, ಕಶ್ಮಲ, ಕೊಳೆ ಹಾಗೂ ದೋಷ ಎಂಬ ಅರ್ಥಗಳಿವೆ.

## ಪರಿಸರ ಮಾಲಿನ್ಯದ ಅರ್ಥ Meaning of the Environment Pollution

ಮಾನವನು ವಾಸಿಸುವ ಭೂಮಿಯ ಅಥವಾ ಯಾವುದೇ ಭಾಗವನ್ನು ಮಾನವನ ಚಟುವಟಿಕೆಗಳ ಮೂಲಕ ವಿರೂಪಗೊಳಿಸುವುದು ಅಥವಾ ನಿಸರ್ಗದ ಹಿತಕ್ಕೆ ವಿರುದ್ಧವಾಗಿ ಮಾರ್ಪಾಡುಗೊಳಿಸುವುದನ್ನು ಪರಿಸರ ಮಾಲಿನ್ಯ ಎಂದು ಕರೆಯಬಹುದು. ಪರಿಸರ ಮಾಲಿನ್ಯ ಎಂದರೆ ಮಲಿನತೆ , ಕೊಳೆ, ದೋಷ ಅಥವಾ ಜೀವಿಗಳ ಮೇಲಾಗುವ ಹಾನಿಕಾರಕ ಪರಿಣಾಮ ಎಂದು ಕರೆಯಬಹುದು. ಪರಿಸರ ಮಾಲಿನವ್ಯ ಎಂದರೆ ಪರಿಸರದ ನೆಲ,ಜಲ, ಶಬ್ದ, ವಾಯು ಮೊದಲಾದವುಗಳಲ್ಲಾಗುವ ಯಾವುದೆ ಬಗೆಯ ಭೌತಿಕ, ರಾಸಾಯಿಕ ಇಲ್ಲವೆ ಜೈವಿಕ ಗುಣಗಳಲ್ಲಿನ ಅಹಿತಕರ ಬದಲಾವಣೆಗಳಿಗೆ ಪರಿಸರ ಮಾಲಿನ್ನ ಎನ್ನಬಹುದು.

## ವ್ಯಾಖ್ಯೆಗಳು Definition of the Environment Pollution

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ: " ಜೀವಮಂಡಲದ ಯಾವುದೇ ಘಟಕದಲ್ಲಿ ಪ್ರತ್ಯಕ್ಷ ಇಲ್ಲವೆ ಪರೋಕ್ಷ ಬದಲಾವಣೆಯಾಗಿ ಅಲ್ಲಿನ ಜೀವಿಗಳಿಗೆ ವಿಶೇಷವಾಗಿ ಮಾನವ ಜನಾಂಗಕ್ಕೆ ಹಾನಿ ಉಂಟುಮಾಡುವ ಅಹಿತಕರ ಪರಿಸ್ಥಿತಿಯನ್ನು ಪರಿಸರ ಮಾಲಿನ್ಯ ಎಂದು ಕರೆದಿದ್ದಾರೆ.

ಕಿಂಬಾಲಯಂಗ್‌ರವರ ಪ್ರಕಾರ: ಜೀವಿಯೊಂದರೆ ಮೇಲೆ ಬಾಹ್ಯವಾಗಿ ಪ್ರಭಾವ ಬೀರುವ ಎಲ್ಲಾ ಬಗೆಯ ಶಕ್ತಿಗಳು , ಪ್ರಚೋದದಕಗಳು ಹಾಗೂ ಪರಿಸ್ಥಿತಿಗಳನ್ನು ಪರಿಸರ" ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಸಾಹುರವರ ಪ್ರಕಾರ: "ವಾಯು , ಜಲ, ಭೂಮಿ, ಅರಣ್ಯ, ವನ್ಯಜೀವಿಗಳು, ಮನುಷ್ಯ, ಸಮಾಜ, ಕೈಗಾರಿಕೆ ಇತ್ಯಾದಿಗಲನ್ನು ಒಳಗೊಂಡಿರುವ ಸಮಗ್ರ ಕ್ರಿಯಾತ್ಮಕ ವ್ಯವಸ್ಥೆಯೇ ಪರಿಸರಿ" ಎಂದಿದ್ದಾರೆ.

ಬ್ರಿಟಾನಿಯಾ ವಿಶ್ವಕೋಶದ ಪ್ರಕಾರ " ಒಂದು ಜೀವಿಯನ್ನು ಸುತ್ತುವರೆದಿರುವ ನಿಸರ್ಗದ ಸ್ವಭಾವಿಕ ಮತ್ತು ಜೈವಿಕ ಶಕ್ತಿಗಳು ಅದರ ಮೇಲೆ ಬಾಹ್ಯವಾಗಿ ಪ್ರಭಾವ ಬೀರುವ ಒಟ್ಟು ಮೊತ್ತವೇ ಪರಿಸರವಾಗಿದೆ"

## ಪರಿಸರ ಮಾಲಿನ್ಯವು 2 ರೀತಿಯಲ್ಲಿ ಕಂಡುಬರುತ್ತವೆ.

1. ನೈಸರ್ಗಿಕ ಮಾಲಿನ್ಯ: ಅಗ್ನಿ ಪರ್ವತಗಳ ಉಗುಳುವಿಕ, ಪ್ರವಾಹಗಳು, ಭೂಕಂಪ ಚಂಡ ಮಾರುತ , ಸುಂಟರಗಾಳಿ, ಕಾಳ್ಗಿಚ್ಚು ಮುಂತಾದವುಗಳಿಂದ ಉಂಟಾಗುವ ಮಾಲಿನ್ಯವನ್ನು ನೈಸರ್ಗಿಕ ಮಾಲಿನ್ಯ ಎನ್ನುವರು.
2. ಮಾನವ ನಿರ್ಮಿತ ಮಾಲಿನ್ಯ: ಆಧುನಿಕ ಕಾಲದ ಜಗತ್ತಿನಲ್ಲಿ ಮಾನವನು ತನ್ನ ಅಭಿವೃದ್ಧಿಗಾಗಿ ಸ್ಥಾಪಿಸಿಕೊಂಡ ಕೈಗಾರಿಕೆಗಳು, ಕಾರ್ಖಾನೆಗಳು, ಉದ್ಯಮಗಳು, ಉತ್ಪಾದನಾ ಘಟಕಗಳು, ಶಾಖೋತ್ಪನ್ನಗಳು, ಶಕ್ತಿ ಉತ್ಪಾದನಾ ಘಟಕಗಳಿಂದ ಉಂಟಾಗುವು ಮಾಲಿನ್ಯವಾಗಿದೆ.

## ಪರಿಸರ ಮಾಲಿನ್ಯದ ಕಾರಣಗಳು Causes of the Environment Pollution

ಜಾಗತಿಕ ಮಾನವನ ಇತಿಹಾಸದಲ್ಲಿ ಮನುಷ್ಯ ಸೃಷ್ಟಿಯಿಂದ ಉಂಟಾಗಿದ್ದು ಈ ಪರಿಸರ ಮಾಲಿನ್ಯ. ಪರಿಸರ ಮಾಲಿನ್ಯವು ಪ್ರಕೃತಿಯ ಸಹಜವಾದ ಬೆಳವಣಿಗೆಯಾಗಿರದೆ ಮನುಷ್ಯನಿಂದ ಸೃಷ್ಟಿಸಲಾಗಿದೆ. ಹೀಗಾಗಿ ಈ ಮಾಲಿನ್ಯಕ್ಕೆ ಮನುಷ್ಯನೆ ಕಾರಣನಾಗಿದ್ದರಿಂದ ಇದರ ಪರಿಹಾರಕ್ಕಾಗಿಯು ಕೂಡ ಆತನೆ ಪ್ರಯತ್ನ ಮಾಡುವುದು ಅಗತ್ಯವಾಗಿದೆ. ಈ ಪರಿಸರ ಮಾಲಿನ್ಯದ ಪರಿಹಾರಗಳನ್ನು ಕಂಡುಹಿಡಿಯಬೇಕಾದರೆ ಅದಕ್ಕೆ ಕಾರಣವಾದ ಅಂಶಗಳು ತಿಳಿಯುವುದು ಮುಖ್ಯವಾಗಿದೆ. ಪರಿಸರ ಮಾಲಿನ್ಯದ ಕಾರಣಗಳು ಕೆಳಗಿನಂತೆ ಪಟ್ಟಿಮಾಡಲಾಗಿದೆ.

| | |
|---|---|
| 1. ಸ್ವಂತ ಸುಖಕ್ಕಾಗಿ ಮಾನವನಿಂದ ನಿಸರ್ಗದ ದುರ್ಬಳಕೆ | Abuse of Nature by man for his self-satisfaction |
| 2. ಜನಸಂಖ್ಯಾ ಸ್ಪೋಟ | Population explosion |
| 3. ಅನಿಯಂತ್ರಿತ ತಂತ್ರಜ್ಞಾನದ | Uncontrolled technology |
| 4. ಕೈಗಾರೀಕರಣ | Industrialization |
| 5. ನಗರೀಕರಣ | Urbanization |
| 6. ಬಡತನ | Poverty |
| 7. ಅನಕ್ಷರತೆ | Illiteracy |
| 8. ವಿಪರೀತ ವಾಹನಗಳ ಬಳಕೆ | More uses of vehicles |
| 9. ಅಣುವಿಕಿರಣ ವಸ್ತುಗಳು | Radio Active material |
| 10. ಸಾಮಾಜಿಕ ವಿಘಟನೆ | Social Disorganization |
| 11. ಪರಿಸರ ಪ್ರಜ್ಞೆಯ ಅಭಾವ | Lack of environment awareness |
| 12. ಉಪಭೋಗವಾದದ ಅತಿರೇಕತೆ | Excessive Consumerism |
| 13. ಅರಣ್ಯಗಳ ನಾಶ | Effects of burning of forests |
| 14. ಕೃಷಿ ತ್ಯಾಜ್ಯಗಳ ಸುಡುವಿಕೆಯ ಪರಿಣಾಮ | Agricultural wastes |
| 15. ಪರಿಸರ ಮಾಲಿನ್ಯ ನಿಯಂತ್ರಣದ ಕೊರತೆ | Lack of control of Environment Pollution |

## ಸ್ವಂತ ಸುಖಕ್ಕಾಗಿ ಮಾನವನಿಂದ ನಿಸರ್ಗದ ದುರ್ಬಳಕೆ — Abuse of Nature by man for his self-satisfaction

- ಶಕ್ತಿಯ ಮೂಲಗಳು ಅಗೆಯಲಾಯಿತು: ಕಲ್ಲಿದ್ದಲು, ಪೆಟ್ರೋಲಿಯಂ
- ಔಷಧಗಳ ಸೃಷ್ಟಿ
- ವಿಜ್ಞಾನ ತಂತ್ರಜ್ಞಾನ ಶ್ರೇಷ್ಠತೆ

## ಜನಸಂಖ್ಯಾ ಸ್ಪೋಟ — Population explosion

- ಜನಸಂಖ್ಯೆ ಹೆಚ್ಚಳ
- ವ್ಯವಸಾಯ ಭುಮಿಯ ವಿಸ್ತರಣೆ
- ಕೀಟನಾಶಕಗಳ ಬಳಕ ಹೆಚ್ಚಳ
- ಘನತ್ಯಾಜ್ಯ ವಸ್ತುಗಳ ಹೆಚ್ಚಳ
- ಅಣುವಿಕಿರಣದ ಪ್ರಸಾರದ ಹೆಚ್ಚಳ
- ಹೆಚ್ಚು ಹೆಚ್ಚು ಇಂಧನಗಳ ಉರಿಸುವುದು
- ಕಾಡುಗಳ ನಾಶ
- ಕ್ರಿಮಿನಾಶಕಗಳನ್ನು ಬಳಸಲಾಗುತ್ತದೆ.
- ಸಸ್ಯಕೋಟಿಗಳ ನಾಶ

## ಅನಿಯಂತ್ರಿತ ತಂತ್ರಜ್ಞಾನದ — Uncontrolled technology

- ವಿಜ್ಞಾನ ತಂತ್ರಜ್ಞಾನಗಳಿಗೆ ಪ್ರಾಮುಖ್ಯತೆ ನೀಡಿದ್ದು

- ತಂತ್ರಜ್ಞಾನದ ನಿಯಂತ್ರಣದಲ್ಲಿ ವಿಫಲ
- ಸಾಮಾಜಿಕ ನಿಯಂತ್ರಣದಲ್ಲಿ ವಿಫಲ

## ಕೈಗಾರೀಕರಣ — Industrialization

- ಕೈಗಾರಿಕೆಯಿಂದ ಹೊರಡುವ ವಿಷಾನಿಲಗಳು
- ಇಂಗಾಲದ ಡೈ ಆಕ್ಸೈಡ್
- ಕಾರ್ಬನ ಮೊನಾಕ್ಸೈಡ್
- ಘನ ಮತ್ತು ತ್ಯಾಜ್ಯ ವಸ್ತುಗಳು

## ನಗರೀಕರಣ — Urbanization

- ನಗರಗಳ ಸಂಚರಣ ಹೆಚ್ಚಾಗುತ್ತಿರುವುದು
- ಕಿರಿದಾದ ರಸ್ತೆಗಳು
- ಕೊಳಚೆ ಪ್ರದೇಶಗಳು
- ಸುರಕ್ಷಿತತೆಯ ಕೊರತೆ
- ಶುಚಿತ್ವಕಾಪಾಡದೆ ಇರುವುದು
- ಜನಸಂಖ್ಯೆ ಮತ್ತು ಜನಸಾಂದ್ರತೆ ಹೆಚ್ಚಾಗುತ್ತಿರುವುದು
- ಎತ್ತರದ ಕಟ್ಟಡಗಳು ರಚನೆ
- ವಾಣಿಜ್ಯಕ ಮತ್ತು ವ್ಯಾಪಾರಿ ಪ್ರಧಾನವಾಗಿರುವುದು
- ಯೋಜನಾರಹಿತ ನಗರಗಳು

## ಬಡತನ — Poverty

- ಜನಸಂಖ್ಯೆಯ ಹೆಚ್ಚಳು
- ಮೂಲಭೂತ ಅವಶ್ಯಕತೆಗಳ ಕೊರತೆ
- ನಿರುದ್ಯೋಗ
- ನಿರಕ್ಷರಿಗಳು
- ಸಾಮಾಜಿಕ ಆರ್ಥಿಕ ಸಮಸ್ಯೆಗಳು
- ಕೃಷಿ ತಂತ್ರಜ್ಞಾನದ ಕೊರತೆ
- ಭೂಮಿಯ ಮೇಲಿನ ಒತ್ತಡ
- ಗುಡಿಕೈಗಾರಿಕೆಗಳು ಮುಚ್ಚಿಹೋಗಿವೆ.
- ಕೃಷಿ ಉದ್ಯೋಗ ಋತುವಿಗಷ್ಟ ಸೀಮಿತವಾದುದು
- ಕೃತಿಯಲ್ಲಿ ಕೌಶಲ್ಯಗಳ ಕೊರತೆ

## ಅನಕ್ಷರತೆ — Illiteracy

- ಶೇ 70ರಷ್ಟು ಗ್ರಾಮೀಣ ಜನರು ನಿರಕ್ಷರಿಗಳಾಗಿರುವುದು
- ನಿರಕ್ಷರಿಗಳಿಗೆ ಉದ್ಯೋಗಾವಕಾಶಗಳು ಇಲ್ಲದಿರುವುದು
- ಶಿಕ್ಷಿತರಾಗಿರುವವರಿಗೆ ಸಾಧನಗಳಿಲ್ಲದಿರುವುದು
- ಮೂಢನಂಬಿಕೆಗಳು ಹೆಚ್ಚಾಗಿರುವುದು
- ನ್ಯಾಯವಾದ ವ್ಯವಹಾರಗಳಲ್ಲಿ ಶೋಷಣೆಗೆ ಒಳಗಾಗುತ್ತಿರುವುದು
- ನಿರಕ್ಷರಿಗಳು ಮೋಸಕ್ಕೊಳಗಾಗುತ್ತಿದ್ದರು.
- ನಿರಕ್ಷರಿಗಳ ವ್ಯಕ್ತಿತ್ವ ಕುಂಠಿತವಾಗುತ್ತಿರುವುದು

## ವಿಪರೀತ ವಾಹನಗಳ ಬಳಕೆ — More uses of vehicles

- ಜನಸಂಖ್ಯೆ ಹೆಚ್ಚಳದಿಂದ ವಾಹನಗಳ ಹೆಚ್ಚಳ
- ವಾಯು ಮಾಲಿನ್ಯ ಹೆಚ್ಚಳ
- ಕೈಗಾರಿಕೆಗಳ ಬೆಳವಣಿಗೆ
- ಇಂಗಾಲದ ಡೈಆಕ್ಸೈಡ್
- ಸಾರಜನಕ ಅಕ್ಸೈಡ್‌ಗಳು

## ಅಣುವಿಕಿರಣ ವಸ್ತುಗಳು — Radio Active material

- ವಿಕಿರಣಶೀಲ ತ್ಯಾಜ್ಯ ವಸ್ತುಗಳೂ
- ವಿಕಿರಣ ವಸ್ತುಗಳು
- ಗಣಿಗಾರಿಕೆ
- ಸಂಸ್ಕರಣ
- ಅಣುವಿದ್ಯುತ ಉತ್ಪಾದನೆ

## ಸಾಮಾಜಿಕ ವಿಘಟನೆ — Social Disorganization

- ಕುಟುಂಬಗಳ ವಿಘಟನೆ
- ಮಾನಸಿಕ ರೋಗಿಗಳು
- ಬಾಲಾಪರಾಧಿಗಳು
- ಅನಾಥರು

## ಪರಿಸರ ಪ್ರಜ್ಞೆಯ ಅಭಾವ — Lack of environment awareness

- ಜನರಲ್ಲಿ ಪರಿಸರದ ಜ್ಞಾನ ಇಲ್ಲದಿರುವುದು
- ಗಿಡಮರಗಳನ್ನು ಬೆಳೆಸುವ ಮನಸ್ಸಿಲ್ಲದಿರುವುದು
- ಕಸದ ರಾಶಿಯನ್ನು ಎಲ್ಲಂದರಲ್ಲಿ ಕಸವನ್ನು ಎಸೆಯುವುದು
- ಘನ ತ್ಯಾಜ್ಯ ವಸ್ತುಗಳನ್ನು ಬಿಸಾಡುವುದು

## ಉಪಭೋಗವಾದದ ಅತಿರೇಕತೆ — Excessive Consumerism

- ಜನರು ಸುಖ ಭೋಗದತ್ತ ವಿಲಾಸಿ ಜೀವನದತ್ತ ವಾಲುತ್ತಿರುವುದು
- ಆಧುನಿಕ ವಸ್ತುಗಳ ಬಳಕೆ ಹೆಚ್ಚಾಗಿರುವುದು
- ವಾಹನ ಗಳು ಹೆಚ್ಚಾಗಿ ಬಳಸುತ್ತಿರುವುದು
- ಸಿದ್ಧವಸ್ತುಗಳು ಹೆಚ್ಚಾಗಿ ಬಳಸುತ್ತಿರುವುದು
- ಘನ ತ್ಯಾಜ್ಯ ವಸ್ತುಗಳ ಪ್ರಮಾಣ ಹೆಚ್ಚಾಗುತ್ತಿರುವುದು

## ಅರಣ್ಯಗಳ ನಾಶ — Effects of burning of forests

- ಕಾಡುಗಳು ಸುಡುವುದು
- ಕೃಷಿ ತ್ಯಾಜ್ಯಗಳನ್ನು ಸುಡುವುದು

- ಗಿಡಮರಗಳನ್ನು ಕಡಿಯುವುದು

## ಕೃಷಿ ಕ್ಷೇತ್ರದಿಂದ ವಿಸರ್ಜಿಸಲ್ಪಡುವ ತ್ಯಾಜ್ಯ Agricultural wastes

- ಕೃಷಿ ತ್ಯಾಜ್ಯಗಳ ಸುಡುವಿಕೆಯ ಪರಿಣಾಮ
- ಆಧುನಿಕ ಕೃಷಿ ತೋಟಗಳ ಸಾಗುವಳಿ
- ರಾಸಾಯನಿಕ ಕೀಟಗಳ ಬಳಕೆ
- ಮಣ್ಣಿನ ಫಲವತ್ತತೆ ನಾಶಗೊಳಿಸುತ್ತದೆ
- ಸೂಕ್ಷಮಾಣು ಜೀವಿಗಳನ್ನು ನಾಶಮಾಡುತ್ತದೆ.
- ಕೃಷಿ ಬೆಳೆಗಳಲ್ಲಿ ಕ್ರೀಮಿನಾಶಕಗಳ ಬಳಕೆ

## ಪರಿಸರ ಮಾಲಿನ್ಯ ನಿಯಂತ್ರಣದ ಕೊರತೆ Lack of control of Environment Pollution

- ಪರಿಸರ ಪ್ರಜ್ಞೆಯ ಕೊರತೆ
- ಪರಿಸರ ಮಾಲಿನ್ಯದ ಅರಿವು ಇಲ್ಲದಿರುವುದು
- ಗೃಹ ತ್ಯಾಜ್ಯಗಳು
- ಕೃಷಿ ತ್ಯಾಜ್ಯಗಳು
- ಕೈಗಾರಿಕಾ ತ್ಯಾಜ್ಯಗಳು
- ಶಿಲೆಗಳು ಚೂರಾಗುವಿಕೆ
- ರಾಸಾಯನಿಕ ಪದಾರ್ಥಗಳು ಬಳಕೆ

## ಪರಿಸರ ಮಾಲಿನ್ಯದ ದುಷ್ಪರಿಣಾಮಗಳು Effects of the Environment Pollution

- ಮಾನವ ಸಂಪತ್ತಿನ ಅಪಾರ ನಷ್ಟ
- ಸಕಲ ಜೀವರಾಶಿಗಳಿಗೆ ಗಂಡಾಂತರ
- ಜಲ ಸಂಪತ್ತಿನ ನಾಶ
- ಕೃಷಿ ಅಭಿವೃದ್ಧಿ ಕುಂಠಿತಗೊಳ್ಳುವುದು
- ರೋಗಗಳು ಹೆಚ್ಚಳವಾಗುವುವು
- ನೆಮ್ಮದಿಯ ಬದುಕಿಗೆ ಭಂಗ
- ಸಂಸ್ಕೃತಿಯ ವಿನಾಶ
- ಪ್ರಗತಿಪರ ಕಾರ್ಯಗಳಿಗೆತೊಂದರೆ

## ಪರಿಸರ ಮಾಲಿನ್ಯದ ರೂಪಗಳು

- ವಾಯು ಮಾಲಿನ್ಯ
- ಜಲ ಮಾಲಿನ್ಯ
- ಶಬ್ದ ಮಾಲಿನ್ಯ
- ಭೂ ಮಾಲಿನ್ಯ
- ಅಣುವಿಕಿರಣ ಮಾಲಿನ್ಯ
- ಸಾಗರ ಮಾಲಿನ್ಯ
- ತಾಪ ಮಾಲಿನ್ಯ
- ಘನ ತ್ಯಾಜ್ಯ ವಸ್ತುಗಳಿಂದ ಮಾಲಿನ್ಯ

## ವಾಯು ಮಾಲಿನ್ಯ

ಭೂಮಿಯ ಮೇಲಿನ ಜೀವಸಂಕುಲಗಳಿಗೆ ಹಾನಿಯನ್ನುಂಟು ಮಾಡುವ ಮಾನವ ಚಟುವಟಿಕೆಗಳ ಮೂಲಕ ಅನಪೇಕ್ಷಿತವಾದ ಘನರೂಪದ ಅಥವಾ ಅನಿಲರೂಪದ ತ್ಯಾಜ್ಯ ವಸ್ತುಗಳನ್ನು ಭೂಮಿಯ ವಾತಾವರಣಕ್ಕೆ ಸೇರಿಸುವುದನ್ನು ವಾಯು ಮಾಲಿನ್ಯ ಎಂದು ಕರೆಯಬಹುದು.

## ವಾಯು ಮಾಲಿನ್ಯದ ಮೂಲಗಳು

- ಪಳೆಯುಳಿಕೆ ಇಂಧನದ ಸಾಮಗ್ರಿಗಳು
- ಪೆಟ್ರೋಲಿಯಂ ಪದಾರ್ಥಗಳು
- ಶೀತಲಿಕರಣ ಯಂತ್ರಗಳು
- ಕಾರ್ಖಾನೆಗಳು
- ಕೈಗಾರಿಕೆಗಳು

## ಜಲ ಮಾಲಿನ್ಯ

ಭೂಮಿಯ 2/3 3ರಲ್ಲಿ 2ರಷ್ಟು ಭಾಗ ನೀರಿನಿಂದ ಕೂಡಿದ್ದು ಅದರಲ್ಲಿ ಕೇವಲ ಶೇ 3ರಷ್ಟು ನೀರು ಮಾತ್ರ ಉಪಯೋಗಕ್ಕೆ ಬರುವಂತಹದು. ಅಂದರೆ ಶೇ 72ಷ್ಟು ನೀರು ಲವಣಾಂಶಗಳಿಂದ ಕೂಡಿದೆ ಶೇ 28ರಷ್ಟು ನೀರು ಮಾತ್ರ ಸಿಹಿ ನೀರಾಗಿದೆ. ಒಟ್ಟಿನಲ್ಲಿ ಭೂಮಿಯ ಬಿಸಿಲಿನ ತಾಅಪಕ್ಕೆ ನೀರು ಆವಿಯಾಗಿ ಲವಣಾಂಶದಿಂದ ಬೇರ್ಪಟ್ಟು ಮಳೆಯಾಗಿ ಸುರಿದು ಮನಗೆ ತಲುಪುತ್ತದೆ. ಮಾನವನು ತನ್ನ ಚಟುವಟಿಕೆಯಿಂದ ನೀರಿನಲ್ಲಿ ವಿಷಕಾರಿ ವಸ್ತುಗಳು ಅಥವಾ ಪದಾರ್ಥಗಳನ್ನು ಬೆರೆಸಿದಾಗ ಜಲಮಾಲಿನ್ಯ ಉಂಟಾಗುತ್ತದೆ.

## ಜಲಮಾಲಿನ್ಯವನ್ನು 3 ಪ್ರಕಾರಗಳಲ್ಲಿ ನೋಡಬಹುದು,

1. ಒಳನಾಡಿನ ಜಲಮಾಲಿನ್ಯ
2. ಅಂತರ್ಜಲ ಜಲಮಾಲಿನ್ಯ
3. ಸಾಗರಗಳ ಜಲಮಾಲಿನ್ಯ

## ಜಲಮಾಲಿನ್ಯದ ಮೂಲಗಳು

- ಕೈಗಾರಿಕೆಗಳ ತ್ಯಾಜ್ಯಗಳು
- ಕ್ರಿಮಿನಾಶಕಗಳು ಬಳಕೆ ಹೆಚ್ಚಾಗಿರುವುದು
- ಮಾಲಿನ್ಯದ ನೀರು ಬಳಕೆ ಮಾಡುವುದು
- ಮಾನವ ವಸತಿ ಪ್ರದೇಶದ ತ್ಯಾಜ್ಯ ವಸ್ತುಗಳು
- ಕೃಷಿ ತ್ಯಾಜ್ಯಗಳು

- ಕಡಲ ಸಾರಿಗೆ

## ಶಬ್ದ ಮಾಲಿನ್ಯ

ಒಬ್ಬ ಆರೋಗ್ಯವಂತ ವ್ಯಕ್ತಿಯು ಮಾತನಾಡುವಾಗ ಅಥವಾ ಕೇಳುವಾಗ ಶಬ್ದದ ತೀವ್ರತೆ 60 ಡೆಸಿಬಲ್‌ಗಳು ಇರುತ್ತದೆ. ಶಬ್ದದ ತೀವ್ರತೆಯು ವಿವಿಧ ರೀತಿಯ ಪರಿಣಾಮವನ್ನು ವ್ಯಕ್ತಿಮತ್ತು ಪರಿಸರದ ಮೇಲೆ ಪರಿಣಾಮ ಬೀರುತ್ತದೆ. ಇಂದಿನ ಆಧುನಿಕ ಯುಗದಲ್ಲಿ ಕಾರ್ಖಾನೆಗಳು ಮ ತ್ತು ವಾಹನಗಳ ಓಡಾಟದಿಂದ ವಿಪರೀತವಾದ ಶಬ್ದವು ಹೊರಡಿಸುತ್ತಿದ್ದು ಶಾಂತವಾದ ನೈಸರ್ಗಿಕ ವಾತಾವರಣವು ಮಲಿನಗೊಳಿಸುತ್ತದೆ. ಹೀಗಾಗಿ ಭೂಮಿಯ ಮೇಲೆ ವಾಸಿಸುವ ಮಾನವರಿಗೆ ಮಾನಸಿಕವಾಗಿ ಕಿರಿಕಿರಿಯನ್ನುಂಟು ಮಾಡುವ ಹಾಗೂ ಮಾನಸಿಕ ಮತ್ತು ದೈಹಿಕ ನೆಮ್ಮದಿಯನ್ನು ಹಾಳು ಮಾಡುವು ಶಬ್ದದ ತೀವ್ರತೆಯನ್ನು ಶಬ್ದ ಮಾಲಿನ್ಯ ಎನ್ನುವರು.

ಕಿವಿಗೆ ಕೇಳಲು ಅಹಿತಕರ ಪ್ರಮಾಣದ ಶಬ್ದವನ್ನು ಸಹ ಶಬ್ದ ಮಾಲಿನ್ಯ ಎನ್ನುತ್ತಾರೆ.

## ಶಬ್ದ ಮಾಲಿನ್ಯದ ಮೂಲಗಳು

- ಸಾರಿಗೆ ವಾಹನಗಳು
- ಕೈಗಾರಿಕ ಚಟುವಟಿಕೆಗಳು
- ಗೃಹೋಪಯೋಗಿ ಬಳಕೆಯ ವಸ್ತುಗಳು

## ಭೂ ಮಾಲಿನ್ಯ/ಮಣ್ಣು ಮಾಲಿನ್ಯ

ಭೂಮಿಯ ಮೇಲ್ಮೈ ಪದರದಲ್ಲಿರುವ ಸಾವಯವ ಮತ್ತು ಅಸಾವಯವ ವಸ್ತುಗಳಿಂದ ಕೂಡಿದ ಪದರವನ್ನು ಮಣ್ಣು ಎನ್ನುವರು. ಮಾನವನ ಚಟುವಟಿಕೆಗಳಿಂದ ಅನೇಕ ವಸ್ತುಗಳು ಜೀವಿಗಳು, ರಾಸಾಯನಿಕಗಳು ಸೇರಿ ಮಣ್ಣಿನ ಭೌತಿಕ ,ರಾಸಾಯನಿಕ ಹಾಗೂ ಜೈವಿಕ ಸ್ವರೂಪವನ್ನು ಬದಲಾಯಿಸಿ ಉಪಯೋಗಕ್ಕೆ ಬಾರದಂತೆ ಮಾಡುವದೆ ಮಣ್ಣು ಮಾಲಿನ್ಯ ಎನ್ನುತ್ತಾರೆ.

## ಮಣ್ಣು ಮಾಲಿನ್ಯದ ಮೂಲಗಳು

- ಕೈಗಾರಿಕಗಳ ತ್ಯಾಜ್ಯ ವಸ್ತುಗಳು
- ಕೃಷಿವಲಯದ ತ್ಯಾಜ್ಯವಸ್ತುಗಳು
- ವಿಕಿರಣ ಶೀಲ ವಸ್ತುಗಳು
- ಗಾಳಿ ಮತ್ತು ನೀರು
- ಮಾನವ ವಿಸರ್ಜಕಗಳು
- ನಗರಗಳ ತ್ಯಾಜ್ಯವಸ್ತುಗಳು

## ಅಣುವಿಕಿರಣ ಮಾಲಿನ್ಯ

ವಾಯು ನೀರು ಮಣ್ಣು ಮೊದಲಾದವುಗಳಲ್ಲಿ ಅಣುವಿಕಿರಣ ಪದಾರ್ಥಗಳು ಸೇರ್ಪಡೆಯಾಗುವುದನ್ನು ಅಣುವಿಕಿರಣ ಮಾಲಿನ್ಯ ಎನ್ನುವರು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಅಣವಸ್ತ್ರಗಳ ಸಾಮರ್ಥ್ಯವನ್ನು ಪರೀಕ್ಷಿಸುವ ಪ್ರಯೋಗಗಳ ಮೂಲಕ, ಅಣ್ವಸ್ತ್ರಗಳ ದಾಳಿಯ ಮೂಲಕ ಹಾಗೂ ಕೈಗಾರಿಕಾ ಉದ್ದೇಶಗಳಿಗಾಗಿ ಅಣುಶಕ್ತಿಯನ್ನು ಬಲಸುವಾಗ ಉಂಟಾಗುವ ವಿಕಿರಣದಿಂದ ವಾತಾವರಣವು ಮಾಲಿನ್ಯಗೊಳ್ಳುವುದು ಹಾಗೂ ವಿಷಯುಕ್ತವಾಗುವುದನ್ನು ಅಣುವಿಕಿರಣ ಮಾಲಿನ್ಯ ಎನ್ನುತ್ತಾರೆ.

## ಅಣುವಿಕಿರಣ ಮಾಲಿನ್ಯದ ಮೂಲಗಳು

- ಅಣುಶಕ್ತಿಯ ಕೇಂದ್ರಗಳು
- ಕೈಗಾರಿಕಾ ಕೇಂದ್ರಗಳು
- ತ್ಯಾಜ್ಯ ವಸ್ತುಗಳ ಉತ್ಪಾದನೆ

- ನೈಸರ್ಗಿಕ ಮೂಲಗಳು
- ಮಾನವ ನಿರ್ಮಿತ ಮೂಲಗಳು

## ಸಾಗರ ಮಾಲಿನ್ಯ

ಮಾನವನು ನೇರವಾಗಿ ಅಥವಾ ಪರೋಕ್ಷವಾಗಿ ತನ್ನ ಚಟುವಟಿಕೆಯಿಂದ ಮಲಿನಕಾರಕ ವಸ್ತುಗಳನ್ನು ಸಮುದ್ರಕ್ಕೆ ಸೇರಿಸಿ ಅದರ ಸ್ವರೂಪವನ್ನು ಬದಲಾಯಿಸಿ ಜೀವಿಗಳಿಗೆ ಬದುಕಲು ಅನುಪಯುಕ್ತವಾಗಿಸುವುದನ್ನು ಸಾಗರ ಮಾಲಿನ್ಯವೆನ್ನುತ್ತಾರೆ.

## ಸಾಗರ ಮಾಲಿನ್ಯದ ಮೂಲಗಳು

- ಕೈಗಾರಿಕೆಗಳು ತ್ಯಾಜ್ಯ
- ಕೊಳಚೆ ನೀರನ್ನು ಸಮುದ್ರಕ್ಕೆ ಬಿಡುವುದು
- ಜನವಸತಿ/ಚರಂಡಿಯು ನೀರುಗಳು
- ತೈಲ ಮಾಲಿನ್ಯ.
- ವಿಕಿರಣ ಮಾಲಿನ್ಯದಿಂದ
- ಅನುಪಯುಕ್ತ ವಸ್ತುಗಳನ್ನು ಬಿಸಾಡುವುದು

## ತಾಪ ಮಾಲಿನ್ಯ

ಉಷ್ಣಾಂಶ ಹೊಂದಿರುವ ತ್ಯಾಜ್ಯ ವಸ್ತುಗಳ ವಿಸರ್ಜನೆಯಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಾಪ ಮಾಲಿನ್ಯ ಎನ್ನುತ್ತಾರೆ. ಕಾರ್ಖಾನೆ ಮತ್ತು ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ ಯಂತ್ರಗಳ ಉಷ್ಣತೆಯನ್ನು ಕಡಿಮೆ ಮಾಡಲು ನೀರನ್ನು ಬಳಸಲಾಗುತ್ತದೆ. ನಂತರ ಬಿಸಿಯಾದ ನೀರನ್ನು ನೇರವಾಗಿ ನದಿ ಅಥವಾ ಹಳ್ಳಗಲಿಗೆ ಬಿಡಲಾಗುತ್ತದೆ. ಇದರಿಂದ ಅಲ್ಲಿನ ಜಲಚರಗಳ ಬದುಕಿಗೆ ಸಂಚಕಾರ ಬರುತ್ತದೆ. ಹೀಗೆ ಇಂತಹ ಬಿಸಿ ನೀರಿನಿಂದಾಗಿ ಜಲಚರಗಳಿಗೆ ದುಷ್ಪರಿಣಾಮ ಉಂಟಾದಾಗ ಇದನ್ನು ತಾಪ ಮಾಲಿನ್ಯ ಎಂದು ಕರೆಯುತ್ತಾರೆ.

## ತಾಪ ಮಾಲಿನ್ಯ ಮೂಲಗಳು

- ಮರಗಿಡಗಳನ್ನು ಕಡಿಯುವುದು
- ಕಾರ್ಖಾನೆಗಳಿಂದ ಹೊರಬರುವ ಬಿಸಿಯಾದ ನೀರು
- ವಿದ್ಯುತ್ ಸ್ಥಾವರಗಳಲ್ಲಿ ಯಂತ್ರಗಳ ಉಷ್ಣತೆಯಿಂದ ಹೊರಬರುವ ಬಿಸಿಯಾದ ನೀರು

## ಘನ ತ್ಯಾಜ್ಯ ವಸ್ತುಗಳಿಂದ ಮಾಲಿನ್ಯ

ನಿಸರ್ಗದ ಮಣ್ಣಿನೊಂದಿಗೆ ಸರಾಗವಾಗಿ ಬೆರೆಯುಲು ಆಗದ ವಸ್ತುಗಳನ್ನು ಭೂಮಿಯಲ್ಲಿ ಹೆಚ್ಚಾದಾಗ ಮಾಲಿನ್ಯವನ್ನುಂಟು ಮಾಡುತ್ತದೆ. ಇಲ್ಲಿ ಮಾನವನು ಬಳಕೆ ಮಾಡಿದ ವಸ್ತುಗಳು ಬಿಸಾಡಿದಾಗ ಭೂಮಿಯಲ್ಲಿ ವಿಲೀನವಾಗದೆ ಮಲೀನತೆಯನ್ನು ಉಂಟು ಮಾಡುವುದನ್ನು ಘನ ತ್ಯಾಜ್ಯ ವಸ್ತುಗಳ ಮಾಲಿನ್ಯ ಎನ್ನುತ್ತಾರೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಗೃಹಬಳಕೆಯಿಂದ ಎಸೆಯುವ ಕಸ, ತ್ಯಾಜ್ಯ ವಸ್ತುಗಳು, ಕಾರ್ಖಾನೆಗಳಲ್ಲಿ ಉರಿಯುವಂತಹ ಘನ ತ್ಯಾಜ್ಯವಸ್ತುಗಳು ಮತ್ತು ತ್ಯಾಜ್ಯ ಸಂಸ್ಕರಣಾ ಕೇಂದ್ರಗಳಲ್ಲಿ ಕೊನೆಗ ಉರಿಯುವಂತಹ ತ್ಯಾಜ್ಯ ವಸ್ತುಗಳನ್ನು ಘನ ತ್ಯಾಜ್ಯ ವಸ್ತುಗಳೆಂದು ಕರೆಯುತ್ತಾರೆ.

- ಪ್ಲಾಸ್ಟಿಕ್ ವಸ್ತುಗಳು (ಕ್ಯಾನ್‌ಗಳು. ಡಬ್ಬಿಗಳು, ಬಾಟಲ್‌ಗಳು, ನೈಲಾನ್, ಪೋಲಿಥಿನ್ ಚೀಲಗಳು, ಗುಜರಿ ಕಾರ್‌ಗಳು)
- ಕಸದ ರಾಶಿಗಳು
- ಕಸದ ತೊಟ್ಟಿಗಳು
- ತರಕಾರಿ, ಹಣ್ಣುಗಳ ಪ್ರಾಣಿಗಳ ಮಾಂಸದ ತ್ಯಾಜ್ಯ

- ಘನ ಮೂಲಗಳಿಂದ
- ವಾಣಿಜ್ಯ ಮೂಲಗಳಿಂದ
- ಆಸ್ಪತ್ರೆ ಮೂಲಗಳಿಂದ
- ಕೈಗಾರಿಕಗಳ ಮೂಲಗಳಿಂದ
- ಗಣಿಗಾರಿಕೆ ಮೂಲಗಳಿಂದ
- ಮಾರುಕಟ್ಟೆ ಮೂಲಗಳಿಂದ

**ಪರಿಸರ ಮಾಲಿನ್ಯದ ಪರಿಹಾರಗಳು**

1. ಜನಸಂಖ್ಯೆಯನ್ನು ನಿಯಂತ್ರಿಸುವುದು
2. ಅರಣ್ಯವನ್ನು ಬೆಳೆಸುವುದು/ ಅರಣ್ಯನಾಶ ತಡೆಗಟ್ಟುವುದು
3. ಗಿಡಮರಗಳನ್ನು ಬೆಳೆಸುವುದು
4. ಕೈಗಾರೀಕರಣ ತಡೆಗಟ್ಟುವುದು
5. ಪರಿಸರ ಸಂರಕ್ಷಣಾ ಕಾನೂನುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು
6. ಪವನಶಕ್ತಿ ಮತ್ತು ಸೌರ ಶಕ್ತಿಗಳನ್ನು ಹೆಚ್ಚಾಗಿ ಬಳಸಬೇಕು

**ಪರಿಸರ ಮಾಲಿನ್ಯವನ್ನು ನಿಯಂತ್ರಿಸುವುದು/ತಡೆಗಟ್ಟುವುದು**

ಪರಿಸರ ಮಾಲಿನ್ಯವು ಜಾಗತಿಕ ವಿದ್ಯಮಾನವಾಗಿದ್ದು ಜಗತ್ತಿನಾದ್ಯಂತ ಎಲ್ಲಾ ದೇಶಗಳು ಈ ಬಗ್ಗೆ ಸೂಕ್ತವಾದ ಗಮನವನ್ನು ಹರಿಸಿ ಸೂಕ್ತವಾದ ಕ್ರಮವನ್ನು ಸಕಾಲದಲ್ಲಿ ಕೈಗೊಂಡಾಗ ಮುಂದಿನ ದಿನಗಳಲ್ಲಿ ಇಂತಹ ಪರಿಸರ ಮಾಲಿನ್ಯದ ಅನಾಹುತಗಳಿಂದ ಭೂಮಿಯನ್ನು ರಕ್ಷಿಸಬಹುದು. ಈ ಸಂಬಂಧವಾಗಿ **ಪರಿಸರ ಮಾಲಿನ್ಯವನ್ನು ತಡೆಗಟ್ಟುವಲ್ಲಿ 2 ರೀತಿಯ ಕ್ರಮಗಳನ್ನು ಕೈಗೊಳ್ಳಬಹುದು ಅವುಗಳು ಹೀಗಿವೆ.**

1 ಜನಸಾಮಾನ್ಯರು ಪಾಲಿಸುವ ಕ್ರಮಗಳು

2. ಸರ್ಕಾರದ ಪ್ರಯತ್ನಗಳು/ಕ್ರಮಗಳು

**1 ಜನಸಾಮಾನ್ಯರು ಪಾಲಿಸುವ ಕ್ರಮಗಳು:** ಎಲ್ಲರಿಗೂ ತಿಳಿದಿರುವಂತೆ ಪರಿಸರ ಮಾಲಿನ್ಯವು ಪ್ರಕೃತಿ ಸಹಜವಾದ ಉತ್ಪನ್ನವಾಗಿರದೆ ಮಾನವ ನಿರ್ಮಿತವಾಗಿರುವುದುರಿಂದ ಇದನ್ನು ತಡೆಗಟ್ಟುವಲ್ಲಿ ಮಾನವರು ಪಾಲಿಸುವ ಕ್ರಮಗಳು ಪರಿಸರ ಮಾಲಿನ್ಯವನ್ನು ತಡೆಯಬಹುದು. ಅವುಗಳನ್ನು ಈ ರೀತಿಯಾಗಿ ಪಟ್ಟಿ ಮಾಡಬಹುದು.

1. ಕೈಗಾರಿಕೆ ಮತ್ತು ಕಾರ್ಖಾನೆಗಳ ಬೆಳವಣಿಗೆಗೆ ನಿಯಂತ್ರಣ

2 ನಗರೀಕರಣ ತಡೆಯುವುದು

3 ಮೋಟಾರು ವಾಹನಗಳ ಓಡಾಡ ಕ್ಷೀಣಿಸುವುದು

4 ತ್ಯಾಜ್ಯ ವಸ್ತುಗಳನ್ನು ದೂರವಾಗಿಸುವುದು

5 ಕಸದ ವಿಂಗಡನೆ ಮತ್ತು ಕಸದ ತೊಟ್ಟಿಯ ಬಳಕೆ

6. ಪರಿಸರ ಸಂರಕ್ಷಣಾ ಅಭಿಯಾ

7. ನೌಕರಶಾಹಿಯ ನಿರ್ಲಕ್ಷಕ್ಕೆ ತಡೆ

8 ಅರಣ್ಯಗಳ ಸಂರಕ್ಷಣೆ

9 ಪರಿಸರ ಸಂರಕ್ಷಣಾ ಸಂಶೋಧನೆಗಳಿಗೆ ಪ್ರೋತ್ಸಾಹ

**ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣ ಕ್ರಮಗಳು**

**Environment protection and measures to control environment pollution:**

ಪರಿಸರ ಸಂರಕ್ಷಣೆ ಎಲ್ಲಾ ಸಮಾಜಗಳ ಹಾಗೂ ವ್ಯಕ್ತಿಗಳ ಸಾಮೂಹಿಕ ಜವಾಬ್ದಾರಿಯಾಗಿದೆ . ಪರಿಸರ ಮಾಲಿನ್ಯದಿಂದ ಆಗುತ್ತಿರುವ ಅನಾಹುತವನ್ನು ಮನಗಂಡ ಭಾರತ ಸಂವಿಧಾನ , ಕೇಂದ್ರ ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ . –

1 . ಪರಿಸರ ಮತ್ತು ಭಾರತ ಸಂವಿಧಾನ :

ಪರಿಸರ ಸಂಕ್ಷಣೆಯು ಸಂವಿಧಾನದ ಆಶಯ ಮತ್ತು ದೇಶದ ಆದ್ಯ ಕರ್ತವ್ಯವಾಗಿದೆ .

ಸಂವಿಧಾನದ 21ನೇ ವಿಧಿಯ ಜೀವಿಸುವ ಹಕ್ಕು ಎಂಬುದನ್ನು ಸರ್ವೋಚ್ಚ ನ್ಯಾಯಾಲಯವು ಪರಿಸರದ ಪ್ರತಿಯೊಂದು ಜೀವಿಗಳಿಗೂ ಅನ್ವಯವಾಗುತ್ತದೆ ಎಂಬುದನ್ನು ತೀರ್ಪು ನೀಡಿದೆ .

ಸಂವಿಧಾನದ ವಿಧಿ 48 ( ಎ ) ವಿಧಿಯು ರಾಜ್ಯಗಳಿಗೆ ಪರಿಸರ ರಕ್ಷಣೆಗೆ ನಿರ್ದೇಶನವನ್ನು ನೀಡಿದೆ . ರಾಜ್ಯವು ದೇಶದ ಅರಣ್ಯಗಳು ಮತ್ತು ವನ್ಯಜೀವಿಗಳ ರಕ್ಷಣೆಯನ್ನು ಮಾಡುವುದಲ್ಲದೇ ಪರಿಸರವನ್ನು ಸಂರಕ್ಷಿಸಿ ಸುಧಾರಿಸಲು ಕಟಿಬದ್ಧವಾಗಬೇಕು .

ಸಂವಿಧಾನದ ವಿಧಿ 51ನೇ ( ಎ ) ಮತ್ತು ( ಬಿ ) ಪ್ರಕಾರ : – ನೈಸರ್ಗಿಕ ಸಂಪನ್ಮೂಲಗಳಾದ ಅರಣ್ಯಗಳು , ಕೆರೆಗಳು , ನದಿಗಳು ಹಾಗೂ ವನ್ಯ ಜೀವಿಗಳನ್ನು ರಕ್ಷಿಸಿ ಸುಧಾರಿಸುವುದು ಹಾಗೂ ಅನುಕಂಪವನ್ನು ಹೊಂದಿದೆ .

2 ಪರಿಸರ ಸಂರಕ್ಷಣೆಗಾಗಿ ಕೈಗೊಂಡಿರುವ ಶಾಸನಾತ್ಮಕ ಕ್ರಮಗಳು

1 . 1948ರ ಕಾರ್ಖಾನೆಗಳ ಕಾಯ್ದೆಯ ಪ್ರಕಾರ ಯಾವುದೇ ಕಾರ್ಖಾನೆಗಳನ್ನು ಸ್ಥಾಪಿಸಲು / ವಿಸ್ತರಿಸಲು ಮಂಜೂರಾತಿ ಸಮಿತಿಗಳ ಅನುಮೋದನೆಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ . ಕೈಗಾರಿಕೆಗಳಿಗೆ ನಿರ್ದೇಶನ ನೀಡುವ ಈ ಕಾಯ್ದೆಯಿಂದ ಕಾರ್ಖಾನೆಗಳು ಹೊರ ಬಿಡಬಹುದಾದ ರಾಸಾಯನಿಕ ವಸ್ತುಗಳ ಬಗ್ಗೆ ಸಂಪೂರ್ಣ ಮಾಹಿತಿ ದೊರೆಯುತ್ತದೆ .

2.1962ರ ಅಣುಶಕ್ತಿ ಕಾಯ್ದೆ ಪ್ರಕಾರ : ಅಣುಶಕ್ತಿಗೆ ಸಂಬಂಧಿಸಿದ ಪ್ರತಿಯೊಂದು ವಿಷಯವು ನೇರವಾಗಿ ಕೇಂದ್ರ ಸರ್ಕಾರದ ಅಧೀನಕ್ಕೊಳಪಟ್ಟಿದೆ . ಈ ಕಾಯ್ದೆಯು ಅಣುಶಕ್ತಿಗೆ ಸಂಬಂಧಿಸಿದ ವಿಷಯಗಳನ್ನು ನಿಯಂತ್ರಿಸಿ ನಿರ್ದೇಶಿಸುತ್ತದೆ .

3 , 1972 ರ ವನ್ಯಜೀವಿ ಸಂರಕ್ಷಣಾ ಕಾಯ್ದೆಯು ವನ್ಯಪ್ರಾಣಿಗಳಿಗೆ ಮತ್ತು ಪಕ್ಷಿಗಳಿಗೆ ಸಂಪೂರ್ಣ ರಕ್ಷಣೆ ಒದಗಿಸುತ್ತದೆ . ಈ ಕಾಯ್ದೆಯ ನಿರ್ದೇಶನದಂತೆ ಪ್ರತಿಯೊಂದು ರಾಜ್ಯ ಸರ್ಕಾರ ಹಾಗೂ ಕೇಂದ್ರಾಡಳಿತ ಪ್ರದೇಶನಗಳು ವನ್ಯಜೀವಿ ಸಲಹಾ ಮಂಡಳಿಯನ್ನು ರಚಿಸಬೇಕು . ಈ ಕಾಯ್ದೆಯು ವನ್ಯಜೀವಿಗಳ ಬೇಟೆಯನ್ನು ಪ್ರತಿಬಂಧಿಸುತ್ತದೆ . ನಿಯಮವನ್ನು ಉಲ್ಲಂಘಿಸಿದವರಿಗೆ ಶಿಕ್ಷೆಯನ್ನು ವಿಧಿಸುವುದು .

4 , ಜಲಮಾಲಿನ್ಯ ತಡೆ ಮತ್ತು ನಿಯಂತ್ರಣಾ ಕಾಯ್ದೆ ( 1974 ) **( Control & prevention of Water )** ಯನ್ನು ಜಾರಿಗೊಳಿಸಿ ಜಲಮಾಲಿನ್ಯಕ್ಕೆ ಕಾನೂನಿನ ನಿಷೇಧ ಹೇರಲಾಗಿದೆ .

5.1981 ರ ವಾಯುಮಾಲಿನ್ಯ ತಡೆ ಮತ್ತು ನಿಯಂತ್ರಣ ಕಾಯ್ದೆಯ **( Control & prevention of air pollution )** ಮೂಲಕ ವಾಯುಮಾಲಿನ್ಯಕ್ಕೆ ತಡೆ ಹಾಕಲಾಗಿದೆ .

6 , 1986 ರ ಪರಿಸರ ಸಂರಕ್ಷಣಾ ಕಾಯ್ದೆ ( **The Environment protection Act 1986** ) : ಈ ಕಾಯ್ದೆಯು ಪರಿಸರವನ್ನು ರಕ್ಷಿಸುವ ಮತ್ತು ಸುಧಾರಿಸುವ ಗುರಿಯನ್ನು ಹೊಂದಿದೆ . ರಾಷ್ಟ್ರವ್ಯಾಪಿ ಕಾರ್ಯಕ್ರಮವನ್ನು ಯೋಜಿಸಿ ಅನುಷ್ಠಾನಗೊಳಿಸುತ್ತದೆ ಹಾಗೂ ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದ ಸಂಶೋಧನೆಗಳನ್ನು ಪ್ರೋತ್ಸಾಹಿಸುವುದು .

7 , 1988 ರ ಮೋಟಾರು ವಾಹನ ಕಾಯಿದೆಯು ( **Motor vehicle Act 1988** ) ಮೋಟಾರು ವಾಹನಗಳ ಸಂಚಾರದಿಂದ ಉಂಟಾಗುವ ವಾಯುಮಾಲಿನ್ಯಕ್ಕೆ ನಿಯಂತ್ರಣ ಹೇರುತ್ತದೆ .

8 . 1989 ರ ಶಬ್ದಮಾಲಿನ್ಯ ಕಾಯ್ದೆ ( **The Noise pollutionAct 1989** ) : ಈ ಕಾಯ್ದೆಯು ಶಬ್ದಗಳ ಪ್ರಮಾಣಗಳ ಮೇಲೆ ನಿಯಂತ್ರಣ ಹೇರುತ್ತದೆ . ವಸತಿ ಪ್ರದೇಶ , ಶಾಲೆ – ಕಾಲೇಜು , ಆಸ್ಪತ್ರೆ , ನ್ಯಾಯಾಲಯ ಮುಂತಾದ ಪ್ರದೇಶಗಳನ್ನು ಶಾಂತಿ ವಲಯ ( **SilentZone** ) ಎಂದು ಘೋಷಿಸಿ ಇಂತಹ ಪ್ರದೇಶಗಳಲ್ಲಿ ಅತಿಯಾದ ಶಬ್ದ , ಧ್ವನಿವರ್ಧಕಗಳು ಮತ್ತು ಪಟಾಕಿಗಳನ್ನು ಸಿಡಿಸುವುದನ್ನು ಪ್ರತಿಬಂಧಿಸುತ್ತದೆ .

9 . 1991 ರ ಸಾರ್ವಜನಿಕ ಹೊಣೆಗಾರಿಕಾ ಭದ್ರತೆ ಕಾಯ್ದೆ ಪ್ರಕಾರ : ಭಾರತ ಸರ್ಕಾರವು 1991 ರಲ್ಲಿ ಈ ಕಾಯ್ದೆಯನ್ನು ಜಾರಿಗೆ ತಂದಿದೆ . ಈ ಕಾಯ್ದೆಯು ಪರಿಸರ ಪರಿಹಾರ ನಿಧಿಯನ್ನು ಸ್ಥಾಪಿಸಲು ಸೂಚಿಸಿ , ವ್ಯಜನಿಕರಿಗೆ ಭದ್ರತೆ ಒದಗಿಸಿದೆ ಹಾಗೂ ತಪ್ಪಿತಸ್ಥರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಅವಕಾಶ ಕಲ್ಪಿಸಿದೆ .

10 , ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗಳು ( **State pollution Control Boards** ) ರಾಜ್ಯಮಟ್ಟದಲ್ಲಿ ಕ್ರಿಯಾಶೀಲವಾಗಿದ್ದು , ರಾಷ್ಟ್ರಮಟ್ಟದ ಕೇಂದ್ರಿಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ( **Central pollution Control Board** ) ಸಹಯೋಗದೊಂದಿಗೆ ಪರಿಸರ ಸಂರಕ್ಷಣೆಯ ಕಾರ್ಯದಲ್ಲಿ ತೊಡಗಿದೆ . ಪರಿಸರ ಇಲಾಖೆಯು ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಅನೇಕ ಕಾರ್ಯಗಳನ್ನು ಹಾಗೂ ಯೋಜನೆಗಳನ್ನು ಸಮನ್ವಯಗೊಳಿಸುತ್ತದೆ .

ಪರಿಸರ ಸಂರಕ್ಷಣೆಯೊಂದಿಗೆ ಆರ್ಥಿಕ ಪ್ರಗತಿ ಎಂಬ ಧೋರಣೆಯೊಂದಿಗೆ ಭಾರತವು ಪ್ರಗತಿ ಪಥದತ ಸಾಗಬೇಕೆಂಬ ಪರಸರ ವಿಜ್ಞಾನಿಗಳ ಮನವಿಯಂತೆ ಸರ್ಕಾರವು ಪ್ರಯತ್ನಶೀಲವಾಗಿದೆ . ಪರಿಸರವನ್ನು ಶಿಥಿಲಗೊಳಿಸದ ಹಾಗೂ ಬರಿದುಗೊಳಿಸದ ಆರ್ಥಿಕ ಪ್ರಗತಿಯನ್ನು ಸುಸ್ಥಿರ ಅಭಿವೃದ್ಧಿ ಎನ್ನಲಾಗಿದೆ .

ಪ್ರಮುಖ ಕಾಯ್ದೆಗಳು

1 ) 1948 – ಕನಿಷ್ಠ ಕೂಲಿ ಕಾಯ್ದೆ .

2 ) 1961 – ವರದಕ್ಷಿಣೆ ನಿಷೇಧ ಕಾಯ್ದೆ

3 ) 1976 – ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ .

4 ) 1976 ಸಮಾನ ವೇತನ ಕಾಯ್ದೆ .

5 ) 1986 ಬಾಲ ಕಾರ್ಮಿಕ ನಿಷೇಧ .

6 ) 1993 ಮಾನವ ಹಕ್ಕುಗಳ ರಕ್ಷಣಾ ಕಾಯ್ದೆ .

7 ) 2005 – ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ .

8 ) ಕರ್ನಾಟಕ ಅರಣ್ಯ ಕಾಯ್ದೆ – 1963

9) ಕರ್ನಾಟಕ ಅಬಕಾರಿ ಕಾಯ್ದೆ – 1965

10 ) ಖಅ ಮತ್ತು ಖಖ ಕಾಯ್ದೆ ಜಾರಿಗೆ ಬಂದ ವರ್ಷ – 1989

11 ) ವನ್ಯಜೀವಿ ಸಂರಕ್ಷಣಾ ಕಾಯ್ದೆ – 1972 ,

12 ) ಶಸ್ತ್ರಾಸ್ತ್ರ ಕಾಯಿದೆ – 1959

**13 ) ಬಾಲ ನ್ಯಾಯಿಕ ಕಾಯಿದೆ – 2000**

**14) ಭ್ರಷ್ಟಾಚಾರ ತಡೆ ಕಾಯ್ದೆ – 1988**

**15) ಲೋಕಾಯುಕ್ತ ಕಾಯ್ದೆ – 1984**

**16 ) ಗೂಂಡ ಕಾಯಿದೆ ಜಾರಿಗೆ ಬಂದ ವರ್ಷ – 1985**

**<https://web.whatsapp.com/>**

## ಆಧಾರ ಗ್ರಂಥಗಳು


- ಕರ್ನಾಟಕ ಸರ್ಕಾರ (2016) ಸಮಾಜಶಾಸ್ತ್ರ ಪರಿಚಯ ಅಭಿಮಾನಿ ಪ್ರಕಾಶನ ರಾಜಾಜಿನಗರ ಬೆಂಗಳೂರು
- ಪ್ರೋ: ಕೆ. ಬೈರಪ್ಪ (2008)ಭಾರತೀಯ ಸಾಮಾಜಿಕ ಸಮಸ್ಯೆಗಳು



PREPARED BY

Dr. Manikamma. N. Sultanpur, Asst. Prof. of Sociology, Smt. C. B. Patil Degree College Chincholi

Dr. A. G. Khan Associate professor of Sociology GFGC Chittapur